It is not necessary to keep all the 200 buses running in these routes. Our ordinary services will be able to cope with the traffic on these routes. To meet the need of extra traffic on special occasions Government have got adequate number of buses.

ಶ್ರೀ ಎಂ. ಮಾದಯ್ಯ.—ಈಗ ತಾವು ಹೇಳಿದ ಪ್ರಕಾರ ಜನವರಿ ಒಂದನೆಯ ತಾರೀಖಿನಲ್ಲಿ ಸರ್ಕಾರದವರು ಮನಾಪಲ ಮಾಡಿಕೊಳ್ಳತಕ್ಕ ಬಗ್ಗೆ ಮುಚ್ಚಳಿಕೆ ಬರೆದುಕೊಟ್ಟು ತದನಂತರ ಹಾಗೆ ರೈನುಗಳನ್ನು ಬಿಟ್ಟುಕೊಡಲು ಒಪ್ಪದೆ ರನ್ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಎಂ. ಮಾದಯ್ಯ.—ಬೆಂಗಳೂರು ಮೈಸೂರು—ಗುಂಡ್ಲುಪೇಟೆ ರೈನಿನಲ್ಲಿ ಹಾಗೆ ಮುಚ್ಚಳಿಕೆ ಬರೆದು ಕೊಟ್ಟು ಈಗ ಅದಕ್ಕೆ ಒಪ್ಪದೆ ಬಸ್ ರನ್ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಎಂ. ಮಾದಯ್ಯ.—ಹಾಗಿದ್ದರೆ ಸಾರ್ವಜನಿಕರಿಗೆ ಸರ್ಕಾರಿ ಬಸ್ಸುಗಳು ಓಡುವ ರಸ್ತೆಗಳಲ್ಲ, ಬಸ್ಸನ್ನು ಓಡಿಸಲು ತಾವು ಅವಕಾಶ ಕೊಡುವಿರಾ?

ಶ್ರೀ ಎಚ್. ಸಿದ್ದವೀರಪ್ಪ.—ಅವಶ್ಯವಿದ್ದರೆ ಆಲೋಚನೆ ಮಾಡುತ್ತೇವೆ.

Mr. SPEAKER.—Questions 175 and 457 may be taken up together as they are of the same nature.

Q.—175. **Sri M. LINGANNA.**—(Nanjangud).—

Report of the Committee on Harvest Scheme.

Will the Government be pleased to state:—

(*a*) whethter the report of the Committee formed under the Chairmanship of the Food Minister to revise the harvest scheme is ready;

(*b*) if so, whether they will submit its report to this House ?

A.—**Sri H. SIDDAVEERAPPA** (Minister for Home Affairs and Agriculture).—

(*a*) Yes;

(*b*) No. The report of the Committee to revise procurement scheme for foodgrains is still under consideration of Government.

Mode of Acquisition of Food grains.

Q.—457. **Sri H. K. SHIVARUDRAPPA** (Gundlupet-Heggaddevankote).—

Will the Government be pleased to state:—

(*a*) the decision they have arrived at in regard to acquisition of food grains;

(*b*) whether they would give effect to that decision in connection with the ensuing acquisition operations;

(*c*) whether they would stop acquisition during this year in view of conditions of scarcity of foodgrains ?

A.—(*a*) **Sri H. SIDDAVEERAPPA** (Minister for Home Affairs and Agriculture).—

(*a*) and (*b*) The mode of acquisition of food grains to be adopted in the State is under consideration of Government.

(*c*) Not possible.

ಶ್ರೀ ಎಚ್. ಕೆ. ಶಿವರುದ್ರಪ್ಪ.—ನನ್ನ (ಎ) ಮತ್ತು (ಬಿ) ಪ್ರಶ್ನೆಗಳಿಗೆ ವಿಷಯ ಪರ್ಯಾಲೋಚನೆಯಲ್ಲಿರುತ್ತೆಂದು ತಿಳಿಸೋಣವಾಗಿದೆ. ಆದ್ದರಿಂದ ತಾವು ಈ ಸಾಲಿನಲ್ಲಿ ಎಲ್ಲ ಕಡೆಯೂ ಧಾನ್ಯ ಶೇಖರಣೆ ಕ್ರಮವನ್ನು ಜಾರಿಗೆ ತರುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಆ ಬಗ್ಗೆ ನಾವಿನ್ನೂ ಯಾವ ಪಾಲಸಿಯನ್ನೂ ನಿರ್ಧರ ಮಾಡಿಲ್ಲ. ಆದು ಯಾವ ರೀತಿ ತೀರ್ಮಾನವಾಗುತ್ತದೋ ಆ ರೀತಿ ನಡೆಸಲಾಗುತ್ತದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ತಾವು 1952-53 ಕ್ಕೆ ಜಾರಿಗೆ ಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—1952-53ಕ್ಕೆ ಯಾವ ರೀತಿ ನಿಬಂಧನೆಗಳನ್ನು ಮಾಡಬೇಕೆಂದು ತೀರ್ಮಾನವಾಗುತ್ತೋ ಆ ಪ್ರಕಾರ ಅದನ್ನು ಜಾರಿಗೆ ತರಲಾಗುತ್ತೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—(ಸಿ) ಪ್ರಶ್ನೆಗೆ 'ಸಾಧ್ಯವಿಲ್ಲ' ಎಂದು ತಿಳಿಸಿದ್ದೀರಿ. ಕಾರಣವೇನು?

ಶ್ರೀ ಎಚ್. ಸಿದ್ದವೀರಪ್ಪ.—ಒಂದಲ್ಲ ಒಂದು ರೀತಿಯಲ್ಲಿ ಈಗಿರತಕ್ಕ ನೀತಿ ಇದ್ದೇಇರುತ್ತದೆಂದು ಇದರ ಅರ್ಥ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಆಹಾರ ಧಾನ್ಯಗಳ ಪೈಕಿ ಕೆಲವು ಎಂದರೆ—ಜೋಳ, ರಾಗಿ, ಭತ್ತ ಇತ್ಯಾದಿ ಬೆಳೆಗಳಿಗೆ—ಸುಗ್ಗಿಯಕಾಲ ಮುಗಿದು ಹೋಗಿರುತ್ತೆಂಬ ಅಂಶ ತಮ್ಮಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗಿದು. ಕೆಲವು ಬೆಳೆಗಳ ಸುಗ್ಗಿಯಕಾಲ ಮುಗಿದುಹೋಗಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಾಗೆ ಮುಗಿದಿರುವಕಾರಣ ವಸೂಲಿ ಸಾಧ್ಯವಿಲ್ಲವೆಂಬುದನ್ನು ತಾವು ಒಪ್ಪಿಕೊಳ್ಳುವಿರಾ?

ಶ್ರೀ ಎಚ್. ಸಿದ್ದವೀರಪ್ಪ.—ಇನ್ನೂ ಕೆಲವು ಧಾನ್ಯಗಳಿಗೆ ಅವಕಾಶವಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಅಭಾವ ಪ್ರದೇಶಗಳಲ್ಲಾದರೂ ಈ ವಸೂಲಿ ಕ್ರಮವನ್ನು ನಿಲ್ಲಿಸಲಾಗುತ್ತದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—As a matter of fact this is an un-precedented year of distress.....ಈ ಅಂಶಗಳನ್ನೆಲ್ಲಾ ಆಲೋಚನೆ ಮಾಡಿಕೊಂಡೇ ಮಾಡಲಾಗುತ್ತೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಾಗಾದರೆ ಆಹಾರ ಅಭಾವ ಇರುವಕಡೆ ಇದನ್ನು ಜಾರಿಗೆ ಕೊಡದಂತೆ ಮಾಡುತ್ತೀರಾ ?